# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2012-13 ನೇ ಸಾಲಿಗೆ ಹಿಂದುಳಿದ ಪ್ರದೇಶಗಳ ಅನುದಾನ ನಿಧಿ (BRGF) ಯೋಜನೆಯಡಿಯಲ್ಲಿ ಚಿತ್ರದುರ್ಗ ಜಿಲ್ಲೆಗೆ ಎರಡನೇ ಕಂತಿನ ಭಾಗಶಃ(Supplementary) ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:**

1. ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯ, ನವದೆಹಲಿ ರವರ ಪತ್ರ ಸಂಖ್ಯೆ: ಎನ್-11019/1441/2012-BRGF(I)(II)(III), ದಿನಾಂಕ: 07-03-2013.
2. ಆರ್ಥಿಕ ಇಲಾಖೆಯ ಜಮಾ ದೃಢೀಕರಣ ಪತ್ರ ಸಂಖ್ಯೆ: ಆಇ/03 /ಬಿಜಿಎಲ್/2013, ದಿನಾಂಕ: 30 -03-2013.

**ಪ್ರಸ್ತಾವನೆ:**

ಹಿಂದುಳಿದ ಪ್ರದೇಶಗಳ ಅನುದಾನ ನಿಧಿ (BRGF) ಯೋಜನೆಯಡಿಯಲ್ಲಿ ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯವು ಕರ್ನಾಟಕ ರಾಜ್ಯದ ಚಿತ್ರದುರ್ಗ ಜಿಲ್ಲೆಗೆ 2012-13ನೇ ಆರ್ಥಿಕ ಸಾಲಿಗೆ ಎರಡನೇ ಕಂತಿನ ಭಾಗಶಃ(Supplementary) ಅನುದಾನವಾಗಿ ರೂ. 8.00 ಕೋಟಿಗಳ (ರೂಪಾಯಿ ಎಂಟು ಕೋಟಿಗಳು ಮಾತ್ರ) ಅನುದಾನವನ್ನು ವಿವಿಧ ಘಟಕಗಳಿಗೆ ಎದುರಾಗಿ ಓದಲಾದ (1)ರ ಪತ್ರದ ಅನುಸಾರ ಹಂಚಿಕೆ ಮಾಡಿರುತ್ತದೆ. ರೂ. 8.00 ಕೋಟಿಗಳ ಅನುದಾನವು ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಜಮೆ ಆಗಿರುವುದಾಗಿ ಹಾಗೂ ಈ ಮೊತ್ತವನ್ನು ಸೆಳೆಯಲು ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯು ಓದಲಾದ (2)ರ ಜಮಾ ದೃಢೀಕರಣ ಪತ್ರದ ಮೂಲಕ ತೀರುವಳಿ ನೀಡಿರುತ್ತದೆ. ಆದುದರಿಂದ ರೂ. 8.00 ಕೋಟಿಗಳ(ರೂಪಾಯಿ ಎಂಟು ಕೋಟಿಗಳು ಮಾತ್ರ) ಭಾಗಶಃ(Supplementary) ಅನುದಾನವನ್ನು ಹಿಂದುಳಿದ ಪ್ರದೇಶಗಳ ಅನುದಾನ ನಿಧಿ (BRGF) ಯೋಜನೆಯ ಉದ್ದೇಶಗಳನ್ನು ಅನುಷ್ಠಾನಗೊಳಿಸಲು ವಿವಿಧ ಘಟಕಗಳಿಗೆ ಎದುರಾಗಿ ಚಿತ್ರದುರ್ಗ ಜಿಲ್ಲೆಗೆ ಬಿಡುಗಡೆಗೊಳಿಸುವ ಕುರಿತು ಈ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 207 ಜಿಪಸ 2012, ಬೆಂಗಳೂರು, ದಿನಾಂಕ: 30-03-2013.**

ಮೇಲಿನ ಪ್ರಸ್ತಾವನೆಯಲ್ಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಹಿಂದುಳಿದ ಪ್ರದೇಶಗಳ ಅನುದಾನ ನಿಧಿ(BRGF) ಯೋಜನೆಯನ್ನು ಮಾರ್ಗಸೂಚಿ ಅನುಸಾರ ಅನುಷ್ಠಾನಗೊಳಿಸಲು 2012-13ನೇ ಆರ್ಥಿಕ ಸಾಲಿಗೆ ಚಿತ್ರದುರ್ಗ ಜಿಲ್ಲೆಗೆ ಎರಡನೇ ಕಂತಿನ ಭಾಗಶಃ(Supplementary) ಅನುದಾನವಾಗಿ ರೂ. 8.00 ಕೋಟಿಗಳನ್ನು (ರೂಪಾಯಿ ಎಂಟು ಕೋಟಿಗಳು ಮಾತ್ರ) ಈ ಕೆಳಕಾಣಿಸಿದ ಘಟಕಗಳಿಗೆ ಎದುರಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ಚಿತ್ರದುರ್ಗ ಇವರಿಗೆ ಬಿಡುಗಡೆಗೊಳಿಸಿ ಆದೇಶಿಸಿದೆ.

| ಕ್ರ.ಸಂ. | ಘಟಕಗಳು | ಬಿಡುಗಡೆಗೊಳಿಸಿದ ಮೊತ್ತ ರೂ ಗಳಲ್ಲಿ |
|---|---|---|
| 1 | ವಾರ್ಷಿಕ STSP ಜಿಲ್ಲಾ ಯೋಜನಾ ಘಟಕ | 1,40,00,000-00 |
| 2 | ವಾರ್ಷಿಕ SCPSC ಜಿಲ್ಲಾ ಯೋಜನಾ ಘಟಕ | 1.78,00,000-00 |
| 3 | ವಾರ್ಷಿಕ SCPSC ಮತ್ತು STSP ಜಿಲ್ಲಾ ಯೋಜನಾ ಘಟಕ | 4,82,00,000-00 |
| ಒಟ್ಟು (ರೂಪಾಯಿ ಎಂಟು ಕೋಟಿಗಳು ಮಾತ್ರ) | | **8,00,00,000-00** |

ಆದೇಶದ ಮೂಲಕ ಬಿಡುಗಡೆಗೊಳಿಸಿರುವ ರೂ. 8.00 ಕೋಟಿಗಳ (ರೂಪಾಯಿ ಎಂಟು ಕೋಟಿಗಳು ಮಾತ್ರ) ಭಾಗಶಃ(Supplementary) ಅನುದಾನವನ್ನು 2012-13ನೇ ಆರ್ಥಿಕ ಸಾಲಿನ ಸಮವಿಕಾಸ ಯೋಜನೆಯ ಲೆಕ್ಕಶೀರ್ಷಿಕೆ 2575-02-196-1-01(ಯೋಜನೆ) ಅಡಿಯಲ್ಲಿ Lumpsum-ZP ರಲ್ಲಿ ಕಲ್ಪಿಸಲಾಗಿರುವ ರೂ. 124.40 ಕೋಟಿಗಳ ಪೈಕಿ (ಜಿಲ್ಲಾ ವಲಯಕ್ಕೆ ಸಂಬಂಧಿಸಿದಂತೆ Link Document ನಲ್ಲಿ ತಿಳಿಸಿರುವ ಹೊಸ ಲೆಕ್ಕ ಶೀರ್ಷಿಕೆ 2575-00-101-0-26 (ಹಿಂದುಳಿದ ಪ್ರದೇಶಗಳ ಅನುದಾನ ನಿಧಿ))ರಡಿ ಭರಿಸುವುದು.

ಈ ಆದೇಶದ ಮೂಲಕ ಬಿಡುಗಡೆಗೊಳಿಸಿದ ಅನುದಾನವು ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

1. ಹಿಂದುಳಿದ ಪ್ರದೇಶಗಳ ಅನುದಾನ ನಿಧಿ(BRGF) ಯೋಜನೆಯ ಮಾರ್ಗಸೂಚಿ ಕ್ರಮ ಸಂಖ್ಯೆ 4.(8) ರ ಅನ್ವಯ ಈ ಅನುದಾನವನ್ನು ಖಜಾನೆಯಿಂದ ಸೆಳೆದು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಜಮೆ ಮಾಡತಕ್ಕದ್ದು.
2. ಘಟಕವಾರು ಹಂಚಿಕೆ ಮಾಡಲಾದ ಅನುದಾನಕ್ಕೆ ಘಟಕವಾರು ಪ್ರತ್ಯೇಕ ಹಣ ಬಳಕೆ ಪತ್ರಗಳನ್ನು ನಿಗಧಿತ ನಮೂನೆಯಲ್ಲಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.
3. **ಆರ್ಥಿಕ ಮತ್ತು ಭೌತಿಕ ವಿವರಗಳನ್ನೊಳಗೊಂಡ ಘಟಕವಾರು ಪ್ರತ್ಯೇಕ ಪ್ರಗತಿ ವರದಿಗಳನ್ನು ನಿಗಧಿತ ನಮೂನೆಯಲ್ಲಿ ಪ್ರತಿ ಮಾಹೆ 7ನೇ ದಿನಾಂಕದೊಳಗೆ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.**
4. ಈ ಆದೇಶದ ಮೂಲಕ ಬಿಡುಗಡೆಗೊಳಿಸಿದ ಅನುದಾನದ ವಿನಿಯೋಗಕ್ಕೆ ಸಂಬಂಧಿಸಿದಂತೆ ಸಂಬಂಧಿಸಿದ ಪ್ರಾಧಿಕಾರದಿಂದ ಲೆಕ್ಕ ಪರಿಶೋಧನೆ ನಡೆಸಿ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸುವುದು.
5. ಯೋಜನೆಯ ಮಾರ್ಗಸೂಚಿ ಕ್ರಮ ಸಂಖ್ಯೆ 4.(6)ರ ಅನ್ವಯ; ಅನುದಾನವು ಸರ್ಕಾರದಿಂದ ಜಿಲ್ಲಾ ಪಂಚಾಯತಿಗೆ ಬಿಡುಗಡೆಗೊಂಡ ಹದಿನೈದು ದಿವಸಗಳೊಳಗಾಗಿ ಯೋಜನೆ ಅನುಷ್ಠಾನಗೊಳಿಸುವ ಪ್ರಾಧಿಕಾರಗಳಾದ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಮುನಿಸಿಪಾಲಿಟಿ ಮತ್ತು ಇತರೆ ಸಂಘ ಸಂಸ್ಥೆಗಳಿಗೆ ಅವರು ಕ್ರಿಯಾ ಯೋಜನೆ ತಯಾರಿಸಿದ ಮೊತ್ತಕ್ಕೆ ಅನುಸಾರವಾಗಿ ಅನುದಾನವನ್ನು ಜಿಲ್ಲಾ ಪಂಚಾಯತಿಯು ಬಿಡುಗಡೆ ಮಾಡತಕ್ಕದ್ದು. ತಪ್ಪಿದಲ್ಲಿ, ಭಾರತೀಯ ರಿಸರ್ವ್ ಬ್ಯಾಂಕ್‌ನ ದರದ ಅನ್ವಯ ದಂಡ ರೂಪದಲ್ಲಿ ಬಡ್ಡಿಯನ್ನು ಪಾವತಿಸಬೇಕಾಗುತ್ತದೆ.
6. **ಹಿಂದುಳಿದ ಪ್ರದೇಶಗಳ ಅನುದಾನ ನಿಧಿ(BRGF) ಯೋಜನೆಯ ಕ್ರಿಯಾ ಯೋಜನೆಯನ್ನು Plan Plus ನಲ್ಲಿ ತಯಾರಿಸಿ, ಪ್ರಗತಿ ವರದಿಯನ್ನು Action soft ತಂತ್ರಾಂಶದಲ್ಲಿ ಅಳವಡಿಸಿ ಜಿಲ್ಲಾ ಪಂಚಾಯತಿಯ ಗಣಕಜಾಲದಲ್ಲಿ(ವೆಬ್‌ಸೈಟ್) ಪ್ರದರ್ಶಿಸುವುದು ಕಡ್ಡಾಯವಾಗಿದೆ. ಇದುವರೆಗೆ ಗಣಕಜಾಲದಲ್ಲಿ ಪ್ರದರ್ಶಿಸದಿದ್ದಲ್ಲಿ ಕೂಡಲೇ ಪ್ರದರ್ಶಿಸಲು ಕ್ರಮವಹಿಸುವುದು**. ತಪ್ಪಿದಲ್ಲಿ ನೇರವಾಗಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು.

ಸಂಖ್ಯೆ: ಎಫ್‌ಡಿ/2/ಟಿಎಫ್‌ಪಿ/2010, ದಿನಾಂಕ:30-04-2010ರ ಆದೇಶದಲ್ಲಿ ಆರ್ಥಿಕ ಇಲಾಖೆಯು ಆಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳಿಗೆ ಪ್ರದತ್ತಗೊಳಿಸಿದ ಅಧಿಕಾರದನ್ವಯ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

30/3/13

( ಮಾರ್ಗರೇಟ್ ಅೀನಾ ನರೋನ್ಹ )
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ.),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

30/3/13

<u>ಪ್ರತಿಯನ್ನು ಇವರಿಗೆ:</u>

01. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
02. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು , ಇವರ ಆಪ್ತ ಕಾರ್ಯದರ್ಶಿಗಳು .
03. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ, ಬೆಂಗಳೂರು, ಇವರ ಆಪ್ತ ಕಾರ್ಯದರ್ಶಿಗಳು .
04. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು(ಪಂ.ರಾಜ್), ಗ್ರಾ.ಅ.ಪಂ.ರಾಜ್ ಇಲಾಖೆ, ಬೆಂಗಳೂರು, ಇವರ ಆಪ್ತ ಕಾರ್ಯದರ್ಶಿಗಳು . .
05. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು, ಇವರ ಆಪ್ತ ಕಾರ್ಯದರ್ಶಿಗಳು .
06. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು, ಇವರ ಆಪ್ತ ಕಾರ್ಯದರ್ಶಿಗಳು.
07. ಸರ್ಕಾರದ ವಿಶೇಷಾಧಿಕಾರಿಗಳು (ಜಿಲ್ಲಾ ಪಂಚಾಯತಿ), ಆರ್ಥಿಕ ಇಲಾಖೆ, ಬೆಂಗಳೂರು
08. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ.ಪಂ.ರಾಜ್ ಇಲಾಖೆ, ಬೆಂಗಳೂರು.
09. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಚಿತ್ರದುರ್ಗ.
10. ನಿರ್ದೇಶಕರು, ಖಜಾನೆ ಗಣಕ ಜಾಲ, ಖನಿಜ ಭವನ, ಬೆಂಗಳೂರು.
11. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
12. ಜಿಲ್ಲಾ ಖಜಾನಾಧಿಕಾರಿಗಳು, ಚಿತ್ರದುರ್ಗ.
13. ಶಾಖಾ ರಕ್ಷಾ ಕಡತಕ್ಕೆ.
14. ಕಛೇರಿ / ಹೆಚ್ಚುವರಿ ಪ್ರತಿ.